ಗೋಡೆಗೆ ಹೊಂದಿಕೊಂಡಿದ್ದ ಸಣ್ಣದಾದ ಕೈತೋಟಗಳು ಕಾಣಿಸಿದವು. ನಾನು ನಿಜವಾಗಿಯೂ ವಿಳಾಸ ತಪ್ಪಿ ಬಂದಿದ್ದೇನೆ ಎಂದುಕೊಂಡೆ. ಅಷ್ಟರಲ್ಲಿ ಮನೆಯ ಪ್ರಾಂಗಣದ ಕಸ ಗುಡಿಸುತ್ತಿದ್ದ ಕೆಲಸದ ಹೆಂಗಸೊಬ್ಬಳು ನಾನು ಗೇಟಿನ ಎದಿರು ನಿಂತದ್ದನ್ನು ನೋಡಿ ಕೈಯ್ಯಲ್ಲಿ ಕಸಬರಿಕೆ ಹಿಡಿದೇ ಬಂದು ಯಾರು ಬೇಕಾಗಿತ್ತು.. ಎಂದು ಸಹಜವಾಗಿಯೇ ಕೇಳಿದಳು. ಯಾವುದೋ ಆಲೋಚನೆಯಲ್ಲಿ ಮುಳುಗಿದ್ದ ನಾನು ತಟ್ಟನೆ ವಾಸ್ತವಕ್ಕೆ ಮರಳಿ ಕೇಳಲೋ ಬೇಡವೋ ಎಂಬಂತೆ 'ಹೇಮಾವತಿಯವರು ಇದ್ದಾರಾ..?' ಎಂದೆ. ನನ್ನ ದನಿ ಸಣ್ಣದಾಗಿ ಕಂಪಿಸುತಿತ್ತು. ಕೆಲಸದ ಹೆಂಗಸು ಮನೆಯ ಒಳಗೆ ಹೋದಳು.

ಅವಳು ಒಳಗೆ ಹೋದ ಮೂರ್ನಾಲ್ಕು ನಿಮಿಷದಲ್ಲಿ ಎಳೆಯ ಮಗುವೊಂದನ್ನು ಎತ್ತಿಕೊಂಡಿದ್ದ ಗೃಹಿಣಿಯೊಬ್ಬಳು ಮನೆಯ ಹೊರಬಂದು ನಾನು ನಿಂತಿದ್ದ ಗೇಟಿನತ್ತ ನಿಧಾನವಾಗಿ ನಡೆದು ಬರತೊಡಗಿದಳು. ನಾನು ನೋಡಿದೆ.. ಗಮನವಿಟ್ಟು ನೋಡಿದೆ.. ನನ್ನ ದೃಷ್ಟಿಯನ್ನು ಅತ್ತಲೇ ಪೂರ್ತಿಯಾಗಿ ಕೇಂದ್ರೀಕರಿಸಿ ನೋಡಿದೆ.. ಅದು ಅವಳೇ..! ಅವಳೇ..! ಸಂಶಯವೇ ಇಲ್ಲಾ..! ಅದು ಹೇಮಾವತಿಯೇ..! ಅವಳು ಹತ್ತಿರ ಬರುತಿದ್ದಂತೆಲ್ಲಾ ನನ್ನ ಹೃದಯ ತುಸು ವೇಗವಾಗಿ ಬಡಿದುಕೊಳ್ಳತೊಡಗಿತು. ಅವಳು ಗೇಟಿನ ಎದುರು ಬಂದು ಸ್ವಲ್ಪ ದೂರದಲ್ಲಿಯೇ ನಿಂತು ನನ್ನನ್ನೇ ದಿಟ್ಟಿಸಿ ನೋಡತೊಡಗಿದಳು! ಬಣ್ಣದ ಹೂವುಗಳ ಚಿತ್ತಾರವಿದ್ದ ದುಬಾರಿಯ ನೈಟಿಯೊಂದನ್ನು ಧರಿಸಿದ್ದವಳು ಮೊದಲಿಗಿಂತ ಸುಂದರವಾಗಿ ಕಂಡಳು. ಒಂದು ಸುತ್ತು ದಪ್ಪಗಾಗಿದ್ದಳು. ದಾಂಪತ್ಯಸುಖವನ್ನು ಅನುಭವಿಸಿದ್ದ ಗೃಹಿಣಿಯೊಬ್ಬಳ ಸಂತೃಪ್ತಭಾವ ಅವಳ ಮುಖದಲ್ಲಿ ಎದ್ದು ಕಾಣಿಸುತಿತ್ತು. ಆದರೆ ತಕ್ಷಣವೇ ಅವಳ ಮುಖ ಒಮ್ಮೆಲೇ ಬಿಳಿಚಿಕೊಂಡಿದ್ದು ಯಾಕೆಂದು ನನಗೆ ತಿಳಿಯಲಿಲ್ಲ. ಭಾಗಶಃ ಅವಳು ನನ್ನನ್ನು ಅವಳ ಮನೆಯ ಬಾಗಿಲಿನ ಬಳಿ ಎಂದೂ ನಿರೀಕ್ಷಿಸಿರಲಿಲ್ಲವೆಂದು ಕಾಣಿಸುತ್ತದೆ..!

'ಯಾರು ನೀವು..?' ತೀವ್ರವಾಗಿ ಕಂಪಿಸುತಿದ್ದ ದನಿಯಲ್ಲಿ ಕೇಳಿದಳು. ನನಗೆ ಅಚ್ಚರಿಯ ಜೊತೆಗೆ ತುಸು ಕೋಪವೂ ಬಂದಿತು.

'ನಾನು ಯಾರು ಎಂದು ತಿಳಿದಿಲ್ಲವೇ' ಎಂದು ಮೆಲ್ಲಗೆ ಆದರೆ ಗಡುಸಾಗಿ ಕೇಳಿದೆ. ಇನ್ನಷ್ಟು ಹತ್ತಿರ ಬಂದವಳು,

'ಹೇಗಿದ್ದೀರಾ.. ದಯವಿಟ್ಟು ತಪ್ಪು ತಿಳಿಯಬೇಡಿ.. ನಾನು ಹಳೆಯದೆಲ್ಲವನ್ನೂ ಮರೆತು ನನ್ನ ಗಂಡ ಮತ್ತು ಮಗುವಿನೊಂದಿಗೆ ಸುಖವಾಗಿದ್ದೇನೆ.. ಇನ್ನೇನು ಅವರು ಊಟಕ್ಕೆ ಬರುವ ಸಮಯವಾಯಿತು.. ಅವರಿಗೆ ನೀವು ಯಾರೆಂದು ತಿಳಿದರೆ ಅಪಾರ್ಥ ಮಾಡಿಕೊಳ್ಳಬಹುದು.. ದಯವಿಟ್ಟು ಹೊರಟು ಹೋಗಿ.. ಇನ್ನೆಂದೂ ಬರಬೇಡಿ..' ಎಂದು ಮೆಲುದನಿಯಲ್ಲಿ ದೀನಳಾಗಿ ಅಲವತ್ತುಕೊಂಡ ಅವಳ ಮಾತುಗಳನ್ನು ಕೇಳಿ ನನಗೆ ಹಾಲು ಕುಡಿದಷ್ಟು ಸಂತೋಷವಾಯಿತು. ನನ್ನನ್ನು ಪ್ರೀತಿಸಿದವಳು ಸುಖವಾಗಿದ್ದಾಳೆ ಎನ್ನುವುದನ್ನು ಕಣ್ಣಾರೆ ಕಂಡು, ಎಂತಹ ಪರಿಸ್ಥಿತಿಯಲ್ಲಿಯೂ ಎಂದೂ ತುಂಬಿಕೊಂಡಿರದ ನನ್ನ ಕಣ್ಣುಗಳು ಆನಂದದಿಂದ ತುಂಬಿಕೊಂಡವು. ಒಡನೆಯೇ ಅವಳ ಬಗ್ಗೆ ತಪ್ಪು ತಿಳಿದಿದ್ದ ನನಗೆ ನಾನೆಂತಹ ಸಣ್ಣಮನುಷ್ಯ ಎಂದು ನಾಚಿಕೆಯಾಯಿತು.

'ಹೇಮಾ.. ನಿನಗೆ ಆ ದೇವರು ಒಳ್ಳೆಯದು ಮಾಡಲಿ.. ಇನ್ನೆಂದೂ ನಾನು ಬರುವುದಿಲ್ಲ.. ಆ ಬಗ್ಗೆ ಚಿಂತಿಸಬೇಡ..' ಎಂದು ಭರವಸೆ ನೀಡಿ ಅವಳ ಅಪ್ಪುಗೆಯಲ್ಲಿದ್ದ ಮಗುವನ್ನೊಮ್ಮೆ ದಿಟ್ಟಿಸಿ ನೋಡಿದೆ. ಮಗುವೂ ಹುಣ್ಣಿಮೆಯ ಚಂದ್ರನಂತೆ ಮುದ್ದಾಗಿತ್ತು. ಒಮ್ಮೆ ಎತ್ತಿಕೊಳ್ಳೋಣವೇ ಎನಿಸಿದರೂ ಅವಳು ಬೇಡ.. ಎಂದು ತಿರಸ್ಕರಿಸಿದರೆ ಎಂಬ ಹೆದರಿಕೆಯಿಂದ ಅತ್ತ ಮತ್ತೊಮ್ಮೆ ತಿರುಗಿ ನೋಡದೆ ನೇರವಾಗಿ ಬಂದು ರಸ್ತೆಯ ಬದಿಯಲ್ಲಿದ್ದ ಕಾರು ಹತ್ತಿ ನನ್ನ ದಾರಿಯಲ್ಲಿ ಸಾಗಿದೆ. ಭಗ್ನ ಪ್ರೇಮದ ಭ್ರಮೆಯಿಂದ ಪಾರಾಗಿ ಬದುಕಿನ ವಾಸ್ತವವನ್ನು ಅರಿತುಕೊಂಡು ತನ್ನ ಬದುಕನ್ನು ರೂಪಿಸಿಕೊಂಡ ಹೇಮಾಳ ಬಗ್ಗೆ ನನ್ನ ಎದೆಯಾಳದಲ್ಲಿ ನನಗರಿವಿಲ್ಲದಂತೆಯೇ ಅಭೂತಪೂರ್ವ ಗೌರವ ಮತ್ತು ಅತೀವ ಹೆಮ್ಮೆ, ಅಭಿಮಾನಗಳು ಮೂಡಿದ್ದವು. ರಸ್ತೆಯಲ್ಲಿ ನಿಧಾನವಾಗಿ ಕಾರನ್ನು ನಡೆಸುತಿದ್ದ ನನ್ನ ಮನಸ್ಸಿನಲ್ಲಿ ಅವ್ಯಕ್ತ ಸಂತಸ, ಉಲ್ಲಾಸಗಳು ತುಂಬಿಕೊಂಡಿದ್ದವು.

ಅದೇ ಸಂತಸ, ಉಲ್ಲಾಸಗಳನ್ನು ಮರೆಯಾಗಲು ಬಿಡದೆ ಅವುಗಳನ್ನು ಮನಸ್ಸಿನಲ್ಲಿ ತುಂಬಿಕೊಂಡೇ ಮನೆ ತಲುಪಿದೆ. ಇಷ್ಟು ಬೇಗ ಮನೆಗೆ ಬಂದದ್ದೇ ಅಲ್ಲದೆ, ಖುಷಿಯಿಂದ ಮಿನುಗುತಿದ್ದ ನನ್ನ ಮುಖವನ್ನು ಕಂಡು ಶರಧಿಗೆ ತೀವ್ರ

## ಇಲ್ಲಿಯವರೆಗೆ



ಬಸ್‌ನಲ್ಲಿ ಪರಿಚಯವಾದ ಹೇಮಾವತಿ ಸುನಿಲ್‌ನ ಫೋನ್ ನಂಬರ್ ಪಡೆದು ನಿರಂತರವಾಗಿ ಮೆಸೇಜ್ ಹಾಕಲು ಆರಂಭಿಸಿದಳು. ಇದರಿಂದ ಸುನಿಲ್‌ಗೆ ಇರಿಸುಮುರಿಸು ಆದರೂ ಅದನ್ನು ನಿರ್ಲಕ್ಷಿಸುತ್ತಾ ಬರುತ್ತಾನೆ. ಒಮ್ಮೆ ಹೇಮಾವತಿ ಕಾರ್ಖಾನೆಗೆ ಬಂದು ರಿಸೆಪ್ಶನ್‌ನಿಂದ ಫೋನ್ ಮಾಡುತ್ತಾಳೆ. ಆಗ ಬ್ಲೂಮೂನ್ ಹೋಟೆಲ್‌ನಲ್ಲಿ ಸಂಜೆ ಸಿಗುವುದಾಗಿ ತಿಳಿಸುತ್ತಾನೆ. ಅದರಂತೆ ಹೋಟೆಲ್‌ಗೆ ಹೋದಾಗ ತನ್ನ ಪ್ರೇಮ ನಿವೇದನೆ ಮಾಡುತ್ತಾಳೆ. ಆಗ ಮದುವೆಯಾಗುವಂಥ ಭಾವನೆ ನಿನ್ನ ಬಳಿ ಇಲ್ಲ ಎಂದು ಸುನಿಲ್ ಹೇಮಾವತಿಗೆ ಹೇಳುತ್ತಾನೆ. ಇದರಿಂದ ಹೇಮಾವತಿ ಬೇಸರಗೊಳ್ಳುತ್ತಾಳೆ. ಮತ್ತೆ ಮೆಸೇಜ್ ಹಾಕುತ್ತಾ ಕೊನೆಗೆ ನಿಲ್ಲಿಸುತ್ತಾಳೆ. ಇದಾದ ಬಳಿಕ ಸುನಿಲ್ ಶರಧಿಯನ್ನು ಮದುವೆಯಾಗುತ್ತಾನೆ. ಈ ನೆನಪುಗಳು ಶರಧಿಯನ್ನು ಮದುವೆಯಾದ ಮೇಲೆ ಸುನಿಲ್‌ಗೆ ಮರುಕಳಿಸುತ್ತಿದ್ದಂತೆ ಗಿರಿಧರ ಎಂಬ ಆಗಂತುಕ ಸುನಿಲ್ ಅನ್ನು ಕಾಣಬೇಕೆಂದು ಬಂದು ಅನುಮಾನಗಳಿಗೆ ಕಾರಣನಾಗುತ್ತಾನೆ.

ಅಚ್ಚರಿಯಾಗಿರಬೇಕು..

'ಏನಪ್ಪಾ ಇದು.. ಹಗಲಿನಲ್ಲಿ ಚಂದ್ರ ಕಾಣಿಸಿದಂತೆ..' ಎಂದು ಸಂಭ್ರಮದಿಂದ ಮುಗುಳ್ನಕ್ಕಳು. ಅವಳನ್ನು ಒಡನೆಯೇ ತಬ್ಬಿ ಸಿಕ್ಕಿದ ಕಡೆಯಲ್ಲೆಲ್ಲಾ ಉನ್ಮಾದದಿಂದ ಮುತ್ತಿನ ಮಳೆಗರೆದೆ. ಅವಳೂ ಸ್ಪಂದಿಸಿದಳು. ಆದರೆ ಕಾರಣವೇನೆಂದು ಅವಳಿಗೆ ತಿಳಿಸಲಿಲ್ಲ.

'ಏನು ಇಷ್ಟೊಂದು ಖುಷಿಯ ಸಮಾಚಾರ..' ಎಂದವಳಿಗೆ 'ಹೀಗೆ ಸುಮ್ನೆ.. ಇವತ್ತು ಫ್ಯಾಕ್ಟರಿಯಿಂದ ಬೇಗ ಬಂದೆನಲ್ಲಾ ಅದಕ್ಕೇ ಖುಷಿಯಾಯಿತು..' ಎಂದು ಹೇಳಿ ಮಾತು ಮರೆಸಿದೆ.

'ರೀ.. ನೀವು ಈವತ್ತು ಬೇಗ ಬಂದಿದ್ದೀರಿ.. ಡಾಕ್ಟರ ಶಾಪಿಗೆ ಹೋಗಿ ಬರಬೇಕು..' ಎಂದು ಉಲ್ಲಾಸದಿಂದ ಉಲಿದಳು.

'ಏನು ಸಮಾಚಾರ.. ಮೈಯ್ಯಲ್ಲಿ ಹುಷಾರಿಲ್ಲವಾ..' ಎಂದು ತುಸು ಗಾಬರಿಯಿಂದಲೇ ಕೇಳಿದೆ.

'ಅದಲ್ಲಾ ರೀ.. ನಾನು ಹೊರಗಡೆ ಆಗದೆ ಆಗಲೇ ಮೂರು ವಾರ ಆಯ್ತು..' ಎಂದು ಮಂದಹಾಸ ಬೀರಿ ನಾಚಿಕೆಯಿಂದ ತಲೆತಗ್ಗಿಸಿದಳು. ತಡಮಾಡದೇ ಅವಳನ್ನು ನಮ್ಮ ಕುಟುಂಬ ವೈದ್ಯರ ಬಳಿ ಕರೆದುಕೊಂಡು ಹೋಗಿ ಪರೀಕ್ಷಿಸಿದೆ. ವೈದ್ಯರು ನೀವು ತಂದೆಯಾಗುತ್ತಿದ್ದೀರಿ..' ಎಂದು ಹೇಳಿದ ಆ ಕ್ಷಣದಲ್ಲಿ ಸಂತಸದಿಂದ ತೇಲಿಹೋದ ನನಗೆ ಹೇಮಾವತಿಯ ಅಪ್ಪುಗೆಯಲ್ಲಿದ್ದ ಮುದ್ದು ಮಗುವಿನದೇ ನೆನಪಾಯಿತು.

* * *

ಆ ವಾರದ ಮುಂದಿನ ದಿನಗಳು ನನ್ನ ಬದುಕಿನಲ್ಲಿ ಅತ್ಯಂತ ಸಂತಸದ ದಿನಗಳು. ನಾನು ತಂದೆಯಾಗುತ್ತಿದ್ದೇನೆ ಎಂಬ ಸಂಭ್ರಮದೊಂದಿಗೆ ಧುತ್ತನೇ ಎದುರಾಗಿದ್ದ ಬೆಟ್ಟದಂತಹ ಸಮಸ್ಯೆ ಎಂದು ನಾನು ತಪ್ಪಾಗಿ ತಿಳಿದಿದ್ದದು ನನ್ನ ಕಣ್ಣ ಮುಂದೆಯೇ ಮಂಜಿನಂತೆ ಕರಗಿ ನೀರಾಗಿ ಹರಿದು ಶಾಶ್ವತವಾಗಿ ದೂರವಾಗಿತ್ತು. ಶರಧಿ ನಮ್ಮಿಬ್ಬರ ಪ್ರೀತಿಯ ಕುಡಿಯನ್ನು ಒಡಲೊಳಗೆ ಹೊತ್ತುಕೊಂಡಿದ್ದಾಳೆ.. ಇನ್ನು ನನ್ನ ವೃತ್ತಿವ್ಯಸನಿ ಸ್ವಭಾವವನ್ನು ಬದಲಾಯಿಸಿಕೊಂಡು ಕಾರ್ಖಾನೆಯಿಂದ ಆದಷ್ಟೂ ಬೇಗ ಮನಗೆ ಬಂದು